**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.**

**ಸೂಚನೆ:-** ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಗೆ ಕಳೆದ 30 ವರ್ಷಗಳಿಂದ ಸರ್ಕಾರ ನಿರಂತರವಾಗಿ ಅನುದಾನ ಮಂಜೂರು ಮಾಡುತ್ತಿದ್ದರೂ, ಇದುವರೆವಿಗೂ ಸಕ್ಕರೆ ಕಾರ್ಖಾನೆ ತುಂಬಾ ಆರ್ಥಿಕ ನಷ್ಟದಲ್ಲಿದೆ. ಸಮರ್ಪಕವಾಗಿ ರೈತರ ಕಬ್ಬನ್ನು ಅರೆಯವುದಾಗಲಿ, ಅವರಿಗೆ ನೀಡಬೇಕಾದ ಮೊತ್ತವನ್ನಾಗಿ ಸಕಾಲದಲ್ಲಿ ಪಾವತಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಕಾರ್ಖಾನೆ ವಿಸ್ತರಣೆ ಹಾಗೂ ಉನ್ನತೀಕರಣ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಇದರಿಂದ ಪ್ರತಿ ಸಾಲಿನಲ್ಲೂ ರೈತರು ತುಂಬಾ ತೊಂದರೆ ಅನುಭವಿಸುತ್ತಿರುವುದು ಮತ್ತು ಕಾರ್ಖಾನೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟಕ್ಕೊಳಗಾಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಸರ್ಕಾರದ ಉತ್ತರ:-**

ಅಂದಿನ ಮೈಸೂರು ಸಂಸ್ಥಾನದ ಶೇ.60ರಷ್ಟು ಷೇರು ಬಂಡವಾಳದೊಂದಿಗೆ 1933ರಲ್ಲಿ ಮಂಡ್ಯದಲ್ಲಿ ದಿ ಮೈಸೂರು ಷುಗರ್ ಕಂಪನಿಯನ್ನು ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ ರಾಜ್ಯ ಸರ್ಕಾರವು ಶೇ.89.39 ರಷ್ಟು ಷೇರು ಬಂಡವಾಳವನ್ನು ಹೊಂದಿರುತ್ತದೆ.

1933-34 ರಿಂದ 1974-75ನೇ ಹಂಗಾಮಿನವರೆಗಿನ 42 ವರ್ಷಗಳಲ್ಲಿ ಕಂಪನಿಯು ಕೇವಲ ಐದು ವರ್ಷಗಳಲ್ಲಿ ಮಾತ್ರ ನಷ್ಟವನ್ನು ಹೊಂದಿರುತ್ತದೆ. ಆದರೆ, 1975-76 ರಿಂದ 2014-15ನೇ ಹಂಗಾಮಿನವರೆಗಿನ 40 ವರ್ಷಗಳಲ್ಲಿ ಕಂಪನಿಯು 30 ವರ್ಷಗಳು ನಷ್ಟವನ್ನು ಹೊಂದಿದ್ದು, 2014-15ನೇ ಸಾಲಿನ ಲೆಕ್ಕಪತ್ರಗಳ ಪ್ರಕಾರ ಒಟ್ಟಾರೆ ರೂ.506.40 ಕೋಟಿಗಳ ಕ್ರೋಢೀಕೃತ ನಷ್ಟವನ್ನು ಹೊಂದಿರುತ್ತದೆ.

ಕಾರ್ಖಾನೆಯ ಯಂತ್ರೋಪಕರಣಗಳ ವಿಸ್ತರಣೆ ಮತ್ತು ಆಧುನೀಕರಣಕ್ಕಾಗಿ ಕಂಪನಿಯು ಮಾಡಿದ ಸಾಲ ಮತ್ತು ಬಡ್ಡಿಗಳ ಹೊರೆಯಿಂದಾಗಿ, ಮುಕ್ತ ಮಾರುಕಟ್ಟೆಯಲ್ಲಿನ ಸಕ್ಕರೆಯ ಬೆಲೆ ಕುಸಿತ, ಅನಿರೀಕ್ಷಿತ ತೆರಿಗೆ ಜವಾಬ್ದಾರಿಗಳು, ಏರಿದ ನಿರ್ವಹಣಾ ವೆಚ್ಚದಿಂದಾಗಿ ಕಂಪನಿಯ ಆರ್ಥಿಕ ಪರಿಸ್ಥಿತಿಯು ಸಂಕಷ್ಟಕ್ಕೆ ಈಡಾಗಿರುತ್ತದೆ. ಈ ಹಿನ್ನಲೆಯಲ್ಲಿ, ಕಂಪನಿಯು ರೋಗಗ್ರಸ್ಥ ಕಾರ್ಖಾನೆಯೆಂದು 2005ರ ಸೆಪ್ಟೆಂಬರ್‌ನಲ್ಲಿ ಬಿ.ಐ.ಎಫ್.ಆರ್ ಗೆ ಅರ್ಜಿಯನ್ನು ಸಲ್ಲಿಸಿರುತ್ತದೆ. ಕಂಪನಿಯು ಕರಡು ಪುನಶ್ಚೇತನ ಯೋಜನೆಯನ್ನು ಒಂದೆರಡು ಬಾರಿ ಸಲ್ಲಿಸಿದ್ದು, ಬಿ.ಐ.ಎಫ್.ಆರ್ ನಲ್ಲಿ 17 ಬಾರಿ ವಿಚಾರಣೆಯು ನಡೆದಿರುತ್ತದೆ.

ಕಾರ್ಖಾನೆಯಲ್ಲಿ ನಿರಂತರವಾಗಿ ಕಬ್ಬು ನುರಿಸದೇ ಇರುವುದು, ಸೂಕ್ತ ಪ್ರಮಾಣದಲ್ಲಿ ಇಳುವರಿ ದೊರೆಯದೇ ಇರುವುದು, ಹಳೆಯ ಯಂತ್ರೋಪಕರಣಗಳ ಬಳಕೆ ಮತ್ತು ಅಧಿಕ ನಿರ್ವಹಣಾ ವೆಚ್ಚ, ಕಾರ್ಖಾನೆಯಲ್ಲಿ ಕಬ್ಬು ನುರಿಸದ ಹಂಗಾಮಿನಲ್ಲಿ ಮಾಡಿದ ನಿರ್ವಹಣಾ ವೆಚ್ಚ, ಕಾರ್ಮಿಕರ ವೇತನ/ಭತ್ಯೆಗಳ ಪಾವತಿಗಾಗಿ ಮಾಡಿದ ವೆಚ್ಚ, ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯದ ಉನ್ನತೀಕರಣ ಹಾಗೂ ಸಹ-ವಿದ್ಯುತ್ ಘಟಕದ ಸ್ಥಾಪನೆ ನಂತರ ಈ ಘಟಕಗಳ ಸ್ಥಾಪಿತ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗದೇ ಇರುವುದು ಮತ್ತು ಕಂಪನಿಯು ಪಡೆದ ಸಾಲಗಳನ್ನು ನಿಗದಿತ ಅವಧಿಯಲ್ಲಿ ಹಿಂದುರುಗಿಸದೇ ಇರುವುದರಿಂದ ಪಾವತಿಸಬೇಕಾದ ಅಧಿಕ ಬಡ್ಡಿದರ, ಚಾಮುಂಡೇಶ್ವರಿ ವಿದ್ಯುತ್ ನಿಗಮದಿಂದ ವಿದ್ಯುತ್ ಅನ್ನು ಖರೀದಿ ಮಾಡಿಕೊಂಡಿರುವುದು ಮತ್ತು ಕಂಪನಿಗೆ ಆದಾಯ ತಂದು ಕೊಡುತ್ತಿದ್ದ ಡಿಸ್ಟಿಲರಿ ಘಟಕವನ್ನು ಸ್ಥಗಿತಗೊಂಡಿರುವುದು ಹೀಗೆ ಒಟ್ಟಾರೆ ಕಂಪನಿಯು ನಷ್ಟವನ್ನು ಅನುಭವಿಸಲು ಕಾರಣಗಳಾಗಿರುತ್ತವೆ.

ಮೈಸೂರು ಷುಗರ್ ಕಂಪನಿಗೆ ದುಡಿಯುವ ಬಂಡವಾಳ ಮತ್ತು ಯಂತ್ರೋಪಕರಣಗಳ ರಿಪೇರಿ, ಕಾರ್ಮಿಕರ ಸ್ವಯಂ ನಿವೃತ್ತಿ ಸೌಲಭ್ಯಗಳಿಗಾಗಿ 1998-99 ರಿಂದ 2022-23ನೇ ಸಾಲಿನವರೆಗೆ ರಾಜ್ಯ ಸರ್ಕಾರದಿಂದ ರೂ.223.48 ಕೋಟಿಗಳ ಸಾಲವನ್ನು ಹಾಗೂ ರೂ.331.28 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 2023-24ನೇ ಹಂಗಾಮಿನ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವ ಉದ್ದೇಶಕ್ಕಾಗಿ ಅವಶ್ಯಕ ಯಂತ್ರೋಪಕರಣಗಳ ದುರಸ್ತಿಗೆ ರೂ.15.00 ಕೋಟಿಗಳನ್ನು ಹಾಗೂ ದುಡಿಯುವ ಬಂಡವಾಳಕ್ಕಾಗಿ ರೂ.35.00 ಕೋಟಿಗಳನ್ನು ಒಟ್ಟಾರೆ ರೂ.50.00 ಕೋಟಿಗಳನ್ನು ದಿನಾಂಕ: 14.06.2023ರಂದು ಬಿಡುಗಡೆಗೊಳಿಸಲಾಗಿದೆ.

ಕಾರ್ಖಾನೆಯ ಸ್ಥಾಪಿತ ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ನುರಿಸುವುದರಿಂದ ಹಾಗೂ ಉಪ ಉತ್ಪನ್ನಗಳ ತಯಾರಿಕೆಯಿಂದ ಕಂಪನಿಗೆ ಆಗುತ್ತಿರುವ ನಷ್ಟವನ್ನು ತಪ್ಪಿಸಬಹುದಾಗಿದ್ದು ಈ ದಿಸೆಯಲ್ಲಿ 2023-24ನೇ ಹಂಗಾಮಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1. ಕಾರ್ಖಾನೆಯಲ್ಲಿನ 30MW Condensing Turbine ನ್ನು Condensing mode ದಿಂದ back pressure mode ಗೆ ಪರಿವರ್ತಿಸುವ ಕೆಲಸವನ್ನು ರೂ.6.45 ಕೋಟಿಗಳ (+ ಜಿ.ಎಸ್.ಟಿ) ವೆಚ್ಚದಲ್ಲಿ ನಿರ್ವಹಿಸಲು ಟೆಂಡರ್ ಮುಖಾಂತರ ಮೆ:ತ್ರಿವೇಣಿ ಟರ್ಬೈನ್, ಬೆಂಗಳೂರು ಇವರಿಗೆ ವಹಿಸಲಾಗಿದೆ. ಇದರಿಂದ ಸಹ-ವಿದ್ಯುತ್ ಘಟಕವನ್ನು ನಿರಂತರವಾಗಿ ಚಾಲನೆಯಲ್ಲಿ ಇಡಬಹುದು ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮದಿಂದ ವಿದ್ಯುತ್ ಖರೀದಿಯನ್ನು ಕಡಿತಗೊಳಿಸಬಹುದು.
2. 17 ಸಾವಿರ ಎಕರೆ ಪ್ರದೇಶದಲ್ಲಿ ಅಂದಾಜು 7.5 ಲಕ್ಷ ಮೆ.ಟನ್ ಕಬ್ಬನ್ನು ಬೆಳೆಯಲಾಗಿದೆ. ಮೈಶುಗರ್ ಕಂಪನಿಗೆ 5745 ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಲ್ಲಿ 2023-24ನೇ ಸಾಲಿಗೆ 5.00 ಲಕ್ಷ ಮೆ.ಟನ್ ಕಬ್ಬು ಲಭ್ಯವಾಗಲಿದೆ. ಇನ್ನುಳಿದ 2.5 ಲಕ್ಷ ಮೆ.ಟನ್ ಕಬ್ಬು ಬಿತ್ತನೆಗೆ, ಬೆಲ್ಲಕ್ಕೆ ಮತ್ತು ಬೇರೆ ಕಾರ್ಖಾನೆಗಳಿಗೆ ಪರಭಾರೆಯಾಗುತ್ತದೆ ಎಂದು ಅಂದಾಜಿಸಲಾಗಿರುತ್ತದೆ. ಆದ್ದರಿಂದ, 3 ರಿಂದ 4 ಲಕ್ಷ ಟನ್ ಕಬ್ಬು ಅರೆಯಲು ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.
3. ಕಬ್ಬು ಕಟಾವು ಕಾರ್ಮಿಕರ ಕೊರತೆಯಾಗದಂತೆ ನೋಡಿಕೊಳ್ಳಲು 150 ಕಬ್ಬು ಕಟಾವು ಮೇಸ್ತ್ರಿಗಳಿಗೆ ರೂ.2.01 ಕೋಟಿಗಳನ್ನು ಮುಂಗಡ ಪಾವತಿಸಲಾಗಿದೆ.
4. 2022-23 ಮತ್ತು 2023-24ನೇ ಹಂಗಾಮುಗಳಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಸುಗಮವಾಗಿ ನಡೆಸುವ ಕೆಲಸವನ್ನು ಮೆ.ಆರ್.ಬಿ.ಟೆಕ್ನೋಕ್ರಾಟ್ಸ್ & ರಿಕ್ಲೈಮರ್ಸ್ ಪ್ರೈ ಪುಣೆ ಇವರಿಗೆ ವಹಿಸಲಾಗಿದೆ.

---

ಸಿಐ 210 ಸಿಓಎಫ್ 2023

**(ಶಿವಾನಂದ ಎಸ್.ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**